ಕರ್ನಾಟಕ ವಿಧಾನ ಪರಿಷತ್

| | | |
|---|---|---|
| 1) | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 144(230) |
| 2) | ಮಾನ್ಯ ಸದಸ್ಯರ ಹೆಸರು | ಶ್ರೀ ಆರ್.ಧರ್ಮಸೇನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| 3) | ಉತ್ತರಿಸಬೇಕಾದ ದಿನಾಂಕ | 11.07.2018 |
| 4) | ಉತ್ತರಿಸುವವರು | ಕಂದಾಯ ಮತ್ತು ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಸಚಿವರು |

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| ಅ) | ವಯಸ್ಕರ ಶಿಕ್ಷಣ ಸಮಿತಿ ನೌಕರರ ಸೇವೆಯನ್ನು ಕೌಶಲ್ಯಾಭಿವೃದ್ಧಿ ಇಲಾಖೆಗೆ ಯಾವಾಗ ಹಸ್ತಾಂತರಿಸಲಾಯಿತು ಹಾಗೂ ಎಷ್ಟು ಜನರನ್ನು ಹಸ್ತಾಂತರಿಸಲಾಯಿತು. | ಸರ್ಕಾರಿ ಆದೇಶ ಸಂ: ಇಡಿ 103 ಪಿಟಿಐ 2017, ದಿನಾಂಕ:11.09.2017 ಹಾಗೂ ಕೌಉಜೀಇ 145 ಉಜೀಇ 2017, ದಿನಾಂಕ: 06.12.2017ರನ್ವಯ ವಿಸರ್ಜಿತ ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿಯ 35 ಸಿಬ್ಬಂದಿಯನ್ನು ದಿನಾಂಕ: 06.04.2018 ರಂದು ಇಲಾಖೆಗೆ ಹಸ್ತಾಂತರಿಸಲಾಗಿದೆ. |
| ಆ) | ಹಸ್ತಾಂತರಗೊಂಡಿರುವ ಅನೇಕ ನೌಕರರಿಗೆ ವೇತನ ಮತ್ತಿತರ ಸೇವಾ ಸೌಲಭ್ಯಗಳನ್ನು ಇದುವರೆಗೆ ನೀಡಿಲ್ಲದಿರುವುದು ನಿಜವೇ. | ನಿರ್ದೇಶಕರು ಲೋಕ ಶಿಕ್ಷಣ ನಿರ್ದೇಶನಾಲಯ ಇವರ ಅಧಿಕೃತ ಜ್ಞಾಪನ ಸಂಖ್ಯೆ: ಎ1/ಡಿಎಂಇ/ಇಎಸ್‌ಟಿ/ ವಿಕರಾವಶಿಸ-48/2017-18, ದಿನಾಂಕ: 05.04.2018 ರನ್ವಯ 35 ಸಿಬ್ಬಂದಿಗಳು ಶಿಕ್ಷಣ ಇಲಾಖೆಯಿಂದ ಬಿಡುಗಡೆಗೊಂಡು ದಿನಾಂಕ: 06.04.2018 ರಂದು ಕೌಶಲ್ಯಾಭಿವೃದ್ಧಿ,ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುತ್ತಾರೆ.<br>ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಯಲ್ಲಿ ವಯಸ್ಕರ ಶಿಕ್ಷಣ ಸಮಿತಿಯ 35 ಸಿಬ್ಬಂದಿಗಳನ್ನು ಕೌಶಲ್ಯಾಭಿವೃದ್ಧಿ ಇಲಾಖೆಗೆ ಹಸ್ತಾಂತರಿಸುವಾಗ ಹುದ್ದೆ ಸಮೇತ ಹಸ್ತಾಂತರಿಸುವುದಿಲ್ಲ. ತದನಂತರ ಸಂಖ್ಯೆ: ಇಡಿ/74/ಪಿಟಿಐ/2018, ದಿನಾಂಕ: 07.07.2018ರ ತಿದ್ದುಪಡಿ ಆದೇಶದಲ್ಲಿ 35 ಸಿಬ್ಬಂದಿಗಳನ್ನು ಹುದ್ದೆ ಸಮೇತ ಕೌಶಲ್ಯಾಭಿವೃದ್ಧಿ ಇಲಾಖೆಗೆ ಹಸ್ತಾಂತರಿಸಿದೆ.<br>2018-19ರ ಸಾಲಿಗೆ ಲೆಕ್ಕಶೀರ್ಷಿಕೆ 2230-03-003-0-02ರಲ್ಲಿ 35 ಸಿಬ್ಬಂದಿಗಳಿಗೆ ವೇತನವನ್ನು ಬಿಡುಗಡೆ ಮಾಡಲು ಅನುದಾನ ಬಿಡುಗಡೆಗೊಳಿಸಿದೆ. ಪ್ರಸ್ತುತ ವಿದ್ಯಾಪೀಠದ ನೌಕರರ ವಿವರಗಳನ್ನು ಖಜಾನೆ-1 ರಲ್ಲಿ ಅಳವಡಿಸಿ ವೇತನ ಪಾವತಿಸಲು ಕ್ರಮ ವಹಿಸಲಾಗುತ್ತಿದೆ. |
| ಇ) | ಎಷ್ಟು ದಿನಗಳಲ್ಲಿ ಈ ಸಮಸ್ಯೆಯನ್ನು ಬಗೆ ಹರಿಸಲಾಗುವುದು? | ವಿದ್ಯಾಪೀಠದ ನೌಕರರಿಗೆ ವೇತನವನ್ನು ಶೀಘ್ರದಲ್ಲಿ ಬಿಡುಗಡೆಗೊಳಿಸುವ ಕುರಿತು ಸೂಕ್ತ ಕ್ರಮ ವಹಿಸಲಾಗುತ್ತಿದೆ. |

ಸಂಖ್ಯೆ: ಕೌಉಜೀಇ 27 ಕೌಗುಪ್ರ 2018

(ಆರ್.ವಿ. ದೇಶಪಾಂಡೆ)
ಕಂದಾಯ ಮತ್ತು ಕೌಶಲ್ಯಾಭಿವೃದ್ಧಿ,
ಉದ್ಯಮಶೀಲತೆ ಮತ್ತು
ಜೀವನೋಪಾಯ ಇಲಾಖೆಯ ಸಚಿವರು